ಶಿವನಪಾದ ಸೇರಿಕೊಂಡಾಗ ಅಮೆರಿಕದಲ್ಲಿದ್ದ ಅವರ ಮಗ ಬಂದು, 'ಮನೆ ಮಾರಬೇಕು ಖಾಲಿ ಮಾಡಿ' ಎಂದಾಗ, 'ಬೇರೆ ಯಾರೋ ಯಾಕೆ? ಆಗಿ ಬಂದಿರುವ ಜಾಗ... ನಾನೇ ತಗೋತೇನೆ' ಎಂದವನು ಆರಕ್ಕೆ ಮೂರಕ್ಕೆ ಚೌಕಾಸಿ ಮಾಡಿ, ಇವನ ಕಡುಲೋಭಿ ವರ್ತನೆಗೆ ಬೇಸತ್ತು ಮಾಲೀಕನ ಮಗ ಮುನಿಸಿಕೊಂಡು, 'ನಿನಗೆ ಮನೆ ಕೊಡುವುದೇ ಇಲ್ಲ' ಎಂದು ಎದ್ದು ಹೋಗಿದ್ದು... ಆಮೇಲೆ ಯಾರಿಂದಲೋ ಹೇಳಿಸಿ ಮತ್ತೆ ವ್ಯಾಪಾರ ಕುದುರಿಸಿಕೊಂಡು... ಏನೆಂದರೂ ಮಾರುಕಟ್ಟೆಯ ಬೆಲೆಗಿಂತ ಒಂದಷ್ಟು ಕಡಿಮೆಗೇ ಖರೀದಿಸಿದ್ದ. ಹಾಗೆಂದು ಮನೆಯೇನೂ ಹೊಸದಾಗಿರಲಿಲ್ಲ. ಮಣ್ಣಿನ ಗೋಡೆಗಳ ಮಂಗಳೂರು ಹಂಚಿನ ಮನೆ ಮುಂದಿನ ಜಗಲಿಗೆ ಎಳೆದ ಒಪ್ಪಾರು, ಹೆಬ್ಬಾಗಿಲು, ಒಂದು ಪಡಸಾಲೆ, ಒಂದು ಹಜಾರ, ಅರಂಗು, ದೇವರ ಮತ್ತು ಅಡಿಗೆ ಕೋಣೆಗಳು ಪ್ರತ್ಯೇಕವಾಗಿದ್ದ, ಸಾಕಷ್ಟು ವಿಶಾಲವಾದ ಮನೆಯೇ... ಏನೇ ಆದರೂ ಹಳೆ ಮನೆ ಎಂಬ ಹಳಹಳಿ ಅವನಿಗಾಗಲೇ ಇಲ್ಲ. ಹಜಾರದ ಕಿಟಕಿಗಳಿಗೆ ಚಿಟ್ಟೆ, ದಪ್ಪ ದಪ್ಪ ಉರುಟುರುಟಾದ ನೇರ ಸರಳುಗಳು... ಒಳಕ್ಕೆ ತೆರೆವ ಕಿಟಕಿ ಕದಗಳು, ಕೋಣೆಯ ಬಾಗಿಲುಗಳೂ ಎರಡೆರಡು... ಆ ಮನೆ ಕೊಂಡುಕೊಂಡ ಮೇಲೆ ರಾಮಣ್ಣ ರಿಪೇರಿಯನ್ನೇನು ಮಾಡಿಸಲಿಲ್ಲ. ಒಂದು ಬಾರಿ ಗೋಡೆ ಬಾಗಿಲಿಗೆ ಸುಣ್ಣ ಬಣ್ಣ ಕಾಣಿಸಿ ಒಂದು ಹಬ್ಬದಡಿಗೆ ಮಾಡಿಸಿ ಸಂಭ್ರಮ ಮುಗಿಸಿದ್ದ. ಮೊದಲೇ ಒಕ್ಕಲಿದ್ದ ಮನೆಗೆ ಗೃಹಪ್ರವೇಶವೇಕೆ ದಂಡ ಎಂಬ ಅವನ ಮಾತಿಗೆ ಅವನಮ್ಮ ಶಾರಕ್ಕಳು ತಾಳ ಹಾಕಿದಳು. ಎಷ್ಟೆಂದರೂ ಈವರೆಗೂ ಅವನು ಯಾವ ಮಾತಿಗೂ ಶಾರಕ್ಕನ ಮಾತು ಮೀರಿದವನಲ್ಲ. ಒಬ್ಬನೇ ಮಗನೆಂದು ಅಚ್ಚೆಯಿಂದ ಬೆಳೆಸಿದ್ದರೂ ಅವನ ಎಲ್ಲ ವ್ಯವಹಾರಗಳನ್ನು ಬದುಕಿನ ಚುಕ್ಕಾಣಿಯನ್ನು ಹಿಡಿದು ಮುನ್ನಡೆಸಿದವಳು ಶಾರಕ್ಕನೆಂದರೆ ತಪ್ಪೇನಿಲ್ಲ. ಆ ಮನೆಗೆ ಸುಣ್ಣ ಬಣ್ಣ ಮಾಡಿಸುವ ಸಂದರ್ಭ ರಾಮಣ್ಣ ಮನೆಯಲ್ಲಿ ಗೋಡೆಯಲ್ಲಿ ಅಲ್ಲಲ್ಲಿದ್ದ ಮೊಳೆಗಳನ್ನು ನೋಡಿ ನೋಡಿ ತೆಗೆಸಿದ್ದ. ನಡು ಹಜಾರದ ಪೂರ್ವದಿಕ್ಕಿಗಿದ್ದ ಈ ಗೋಡೆಯಲ್ಲಿದ್ದ ಒಂದು ಮೊಳೆಯನ್ನು ತೆಗೆಯಲಾಗಿರಲೇ ಇಲ್ಲ. ಆಕಾಶ ನೀಲಿ ಬಣ್ಣದ ಡಿಸ್ಟೆಂಪರ್ ಹೊಡೆಯುವಾಗ ಆ ಮೊಳೆಗೂ ಬಣ್ಣ ತಾಗಿ ಅದರ ಅಸ್ತಿತ್ವವೇ ಇಲ್ಲದಂತಾದಾಗ ಅವನಿಗೆ ಸಮಾಧಾನ. ಗೋಡೆಯನ್ನು ಅನತಿ ದೂರದಿಂದ ನೋಡಿದಾಗ ಏನೂ ಕಾಣಿಸದಿದ್ದರೂ ತುಸು ಹತ್ತಿರದಿಂದ ಕುರ್ಚಿಯಲ್ಲಿ ಕೂತಾಗ ಮಾತ್ರ ತನ್ನ ಇರುವಿಕೆಯನ್ನದು ತೋರುತ್ತಿತ್ತು. ಅವನಷ್ಟು ಉಪೇಕ್ಷಿಸಿದ್ದ ಆ ಮೊಳೆ ಈಗ ಪ್ರಮುಖವಾಗಿ ಬೆಳ್ಳಿ ತಗಡಿನ ಯಂತ್ರವೊಂದನ್ನು ಆನಿಸಿಕೊಂಡು ಮಹತ್ವಪೂರ್ಣವಾಗಿ ಕಾಣಿಸುತ್ತಿದ್ದುದು ಮೊದಮೊದಲಿಗೆ ಅವನಿಗೇನೂ ಅನ್ನಿಸಿರಲಿಲ್ಲ. ಇಷ್ಟಕ್ಕೂ ಈ ಮನೆ ತೆಗೆದುಕೊಳ್ಳುವಾಗ ಮೊದಲಿಗೆ ಬೇಡವೆಂದವಳು ಶಾರಕ್ಕನೆ. 'ಇಷ್ಟು ಹಟ್ಟ ಹಳೇ ಮನೆ... ಯಾಕಾರ ಬೇಕು ನಿಂಗೆ? ಬದಲಿಗೆ ಒಂದು ಖಾಲಿ ಜಾಗ ತಗೊಂಡು ಚೆನ್ನಾಗಿ ಕಟ್ಟಿಸು' ಎಂದಿದ್ದಳಾದರೂ... ಈ ಮನೆ ತನ್ನ ಮಗನಿಗೆ ಆಗಿ ಬಂದಿದೆಯೆಂಬೊಂದು ಕಾರಣವೂ ಜೊತೆಯಾಗಿ, ಈಗದು ತಮಗೆ ಸಿಗುತ್ತಿರುವ ಧಾರಣೆ, ಪೇಟೆ ಧಾರಣೆಗಿಂತ ಬಹಳಷ್ಟು ಕಮ್ಮಿ ಎಂಬುದೂ ಅರಿವಾಗಿ ಕೊಂಡುಕೊಳ್ಳಲು ಸಹಾಯಾರ್ಥವಾಗಿ ತನ್ನ ಉಳಿಕೆ ಹಣವನ್ನು ಕೊಟ್ಟು, ಸೊಸೆಯ ಕೆಲ ನಗನಟ್ಟುಗಳನ್ನು ಮಾರಿಸಿದ್ದಳು. ಶಾರಕ್ಕನಿಗೆ ಸೊಸೆಯೆಂದರೆ ಅಸಡ್ಡೆಯಲ್ಲದಿದ್ದರೂ ಪ್ರೀತಿಯೇನಿರಲಿಲ್ಲ. ಏನೆಂದರೂ ಅವಳು ತನ್ನ ಮಗನ ಹೆಂಡತಿ, ಮೊಮ್ಮಗನ ತಾಯಿಯೆಂದು ಮಾತ್ರ ಅವಳಿಗೆ ಪ್ರೀತಿ. ತಾನು ತನ್ನ ಮಗ ಅವಳನ್ನು ಏನೂ ಅನ್ನಬಹುದು. ಬೇರೆಯವರು... ಅವರು ಯಾರೇ ಆಗಲಿ ಅವಳನ್ನು ಗೌರವಿಸಬೇಕು. ತನ್ನ ಸೊಸೆಯೆಂಬ ಕಾರಣಕ್ಕೆ. ಅಮ್ಮ ಹೇಳಿದ್ದನ್ನು ನೂರಕ್ಕೆ ಇನ್ನೂರು ಸತ್ಯವೆನ್ನುವ ರಾಮಣ್ಣನಿಗೂ ಹೆಂಡತಿ ಎಂದರೆ ವಿಶೇಷವೇನಲ್ಲದ ಒಂದು ಹೆಣ್ಣು ಜೀವ. ಆ ಮನೆಯ ಒಪ್ಪ, ಓರಣ, ತನ್ನ, ತನ್ನ ತಾಯಿಯ, ಮಗನ ಯೋಗಕ್ಷೇಮದ ಹೊಣೆ ಅವಳದೇ ಎಂಬ